# ಯೆರೂಸಲೇಮಿನ ಸಭೆ



**ಸಬ್ಬತ್ತಿನ ಮಧ್ಯಾಹ್ನ**

ಈ ವಾರದ ಅಧ್ಯಾಯನಕ್ಕಾಗಿ ಓದಿರಿ: ಅ.ಕೃ.15; ಗಲಾ. 2:11–13; ವಿಮೊ.12:43–49; ರೊ. 3:30;, ಯಾಜ. 18:30; ಪ್ರಕಟಣೆ 2:14,20.

**ಸ್ಮರಣವಾಕ್ಯ:– ಕರ್ತನಾದ ಯೇಸುವಿನ ಕೃಪೆಯಿಂದಲೇ ನಾವು ರಕ್ಷಣೆ ಹೊಂದುವೆವೆಂಬದಾಗಿ ನಂಬುತ್ತೇವಲ್ಲಾ; ಹಾಗೆಯೇ ಅವರೂ ಹೊಂದುವರು ಎಂದು ಹೇಳಿದನು (ಅ.ಕೃ. 15:11)**

ಎರಡು ವರ್ಷಗಳ ಕಾಲ ಕಳೆದು ಹೋದ ಮೇಲೆ ಪೌಲ ಮತ್ತು ಬಾರ್ನಬರು ಸೇರಿ ಅಂತಿಯೋಕ್ಯಕ್ಕೆ ಹಿಂದಿರುಗಿದರು. ಅಲ್ಲಿ ಯ ಸಭೆಯು ಅವರನ್ನು ಸುವಾರ್ತಿಕರಾಗಿ ಕಳುಹಿಸುವಲ್ಲಿ ನೆರವಾಗಿತ್ತು. ಹಾಗಾಗಿ ಅವರು ಸಭೆಗೆ ಹಿಂದಿರುಗಿ ವರದಿ ಸಲ್ಲಿಸಬೇಕಿತ್ತು. ಅವರು ಏನು ಕೆಲಸ ಮಾಡಿದ್ದಾರೆ ಎಂಬುದು ವರದಿ ಒಳಗೊಂಡಿರಲಿಲ್ಲ ಆದರೆ ದೇವರು ಅವರ ಮೂಲಕ ಏನು ಮಾಡಿದ್ದಾನೆ ಎಂಬುದು ಇತ್ತು. ಆ ವರದಿಯ ಉದ್ದೇಶವೇನೆಂದರೆ ಅನ್ಯಜನರನ್ನು ನಂಬಿಕೆಯಲ್ಲಿ ತರುವಲ್ಲಿ ಯಶಸ್ಸು ಕಂಡದ್ದಾಗಿತ್ತು ಅದಲ್ಲದೆ ಅನೇಕ ಯೆಹೂದ್ಯರು ಸಹ ನಂಬಿಕೆಯಲ್ಲಿ ಸೇರಿದ್ದರು. ಕಾರ್ನಾಲಿಸ್‌ನ ಕಥೆಯಾದ ನಂತರವೂ ಅನ್ಯ ಜನರಿಗೆ ಸುನ್ನತಿ ಮಾಡಿಸದೆ ಮತಾಂತರ ಮಾಡಿದ್ದು ಒಂದು ಸಮಸ್ಯೆಯಾಗಿತ್ತು. *(ಅ.ಕೃ.11:1–18).* ಆದರೆ ಈಗ ಹೆಚ್ಚಿನ ಸಂಖ್ಯೆಯಲ್ಲಿ ಅನ್ಯಜನರು ಸಭೆ ಸದಸ್ಯತ್ವವನ್ನು ಹೊಂದಿದ್ದಾರೆ ಹಾಗಾಗಿ ಅದು ದೊಡ್ಡ ಸಮಸ್ಯೆಯಾಯಿತು. ಅ ಯೆರೂಸಲೇಮಿನಲ್ಲಿ ಅನೇಕರು ನಂಬಿಕೆಯಲ್ಲಿದ್ದರು ಅಸಮಾಧಾನವಾಗಿದ್ದರು. ಅವರಿಗೇನೆಂದರೆ ಅನ್ಯಜನರು ಮೊದಲು ಸುನ್ನತಿ ಮಾಡಿಸಿಕೊಳ್ಳಬೇಕಾಗಿತ್ತು ಹಾಗೆ ಮಾಡಿಸಿಕೊಂಡರೆ ಅನ್ಯಜನರು ಸಹ ಯೆಹೂದ್ಯರೊಂದಿಗೆ ಬೆರೆಯಬಹುದಾಗಿತ್ತು ಮತ್ತು ದೇವ ಜನರೊಂದಿಗೆ ಸೇರಿ ಬೆರೆಯಬಹುದಾಗಿತ್ತು. ಅ.ಕೃ. 15ನೇ ಅಧ್ಯಾಯ ಅನ್ಯಜನರ ಸಮಸ್ಯೆಯು ಸಂದಿಗ್ದ ಸ್ಥಿತಿ ತಲುಪಿದ್ದು ಮತ್ತು ಸಭೆ ಒಟ್ಟಾಗಿ ಈ ಸಮಸ್ಯೆಗೆ ಪರಿಹಾರ ಹುಡುಕುವುದರ ಬಗ್ಗೆ ಇದೆ. ಅಪೊಸ್ತಲ ಸಭೆಯ ಇತಿಹಾಸದಲ್ಲಿ ಆ ಸಭೆ ಜಗತ್ತಿನೆಲ್ಲೆಡೆ ಹರಡಲು ಯೆರೂಸಲೇಮಿನ ಸಭೆ ಮುಖ್ಯ ಕಾರಣವಾಯಿತು.

**ಭಾನುವಾರ** ಆಗಸ್ಟ್–19

## ಸಮಸ್ಯೆಯ ಹಂತ

ಮೊದಲಿನಿಂದಲು ಅಂತಿಯೋಕ್ಯ ಸಭೆಯು ಯೆಹೂದ್ಯರನ್ನು ಮತ್ತು ಸುನ್ನತಿ ಮಾಡಿಸದೆ ಇದ್ದ ಅನ್ಯ ಜನರನ್ನು ಒಳಗೊಂಡಿತ್ತು *(ಅ.ಕೃ.11:19–21, ಗಲಾ. 2:11–13)* ಸಹಜವಾಗಿ ಅವರು ಅನೋನ್ಯತೆಯಿಂದ ಸಮಧಾನವಾಗಿ ಇದ್ದರು. ಆ ಅನೋನ್ಯತೆಯು ಯರೂಸಲೇಮಿನಿಂದ ಬಂದ ನಂಬಿಗಸ್ತರಿಂದಾಗಿ ಒಡೆದು ಹೋಯಿತು.

**ಅ.ಕೃ. 15:1–5 ಓದಿರಿ: ಯಾವ ಸಮಸ್ಯೆಯನ್ನು ಸಭೆಯು ಎದಿರುಸುತಿತ್ತು?**

ಸಂಪ್ರದಾಯಕವಾಗಿ ಯೆಹೂದ್ಯರೆಂದು ಕರೆಸಿಕೊಂಡು ಕೆಲವರು ಯುದಾಯದವರು 5ನೇ ವಾಕ್ಯದಲ್ಲಿ ತಿಳಿಸಿದಂತೆ ನಂಬಿದವರಾಗಿದ್ದರು. ಫರಿಸಾಯರು ಸಭೆಯಲ್ಲಿ ಉಪಸ್ಥಿತರಾಗಿದ್ದಾರೆ ಅದು ನಮಗೆ ಆಶ್ಚರ್ಯ ಮೂಡಿಸಬಾರದು ಏಕೆಂದರೆ ಪೌಲನು ಸಹ ಮತಾಂತರ ಆಗುವ ಮುನ್ನ ಫರಿಸಾಯನಾಗಿದ್ದನು. ಆ ಗುಂಪೊಂದು ಸ್ವಚ್ಚೆಯಮೇರೆಗೆ ಅಂತಿಯೋಕ್ಯಕ್ಕೆ ಹೋಗಿದ್ದರು, ಅದೇ ಸಮಯದಲ್ಲಿ ಇನ್ನೊಂದು ಘಟಣೆ ಅಂತಿಯೋಕ್ಯದಲ್ಲಿ ನಡೆಯಿತು ಇದನ್ನು ಗಮನಿಸಿದರೆ ಅನೇಕ ಯ-ಹೂದ್ಯರು ಅಪೊಸ್ತಲರಿಗೆ ಸುನ್ನತಿ ಮಾಡಿಸದೆ ಸಭೆಯಲ್ಲಿ ಇದ್ದ ಅನ್ಯಜನರ ಬಗ್ಗೆ ಅಸಮಾಧಾನ ಇತ್ತು. *(ಗಲಾ. 2:1-13)* ಗಲಾತ್ಯದವರಿಗೆ ಬರೆದ ಪತ್ರದಲ್ಲಿ ಯೆಹೂದ್ಯರ ಬಗ್ಗೆ ಸಕಾರಾತ್ಮಕವಾಗಿ ಹೇಳಲಿಲ್ಲ ಅವರು ತೊಂದರೆ ಮಾಡುವ ಜನರೆಂದು ಹೇಳುತ್ತಾನೆ.. *(ಗಲಾ. 1:7; 5:10)* ಮತು ಸುಳ್ಳು ಸಹೋದರರು. *(ಗ.ಲಾ. 2:4)* ಅವರ ನಿಜವಾದ ಉದ್ದೇಶವೆಂದರೆ ಮತಾಂತರವಾದ ಅನ್ಯಜನರನ್ನು ಕಾನೂನು ಆಳುಗಳನ್ನಾಗಿ ಮಾಡಬೇಕೆಂದಿದ್ದರು. ಅವರ ಅಂಶವೆಂದರೆ ಅನ್ಯಜನರು ಸುನ್ನತಿ ಮಾಡಿಸಿಕೊಂಡು ಯೆಹೂದ್ಯರ ಪದ್ದತಿ ವಿದಿವಿಧಾನಗಳನ್ನು ಪಾಲಿಸಿದರೆ ಮಾತ್ರ ಅವರಿಗೆ ರಕ್ಷಣೆ ಸಿಗಲು ಸಾಧ್ಯ ಇಲ್ಲವಾದರೆ ಇಲ್ಲವೆಂದು ತಿಳಿದಿದ್ದರು. ಹಳೆಯ ಒಡಂಬಡಿಕೆಯ ಪ್ರಕಾಶ ದೇವರಿಂದ ಆರಿಸಲ್ಪಟ್ಟ ಜನರಿಗೆ ಮಾತ್ರ ರಕ್ಷಣೆ ಉಂಟು ಎಂದು ಅವರು ನಂಬಿದ್ದರು ದೇವರಿಂದ ಆರಿಸಲ್ಪಟ್ಟ ಜನರೊಂದಿಗೆ ಬೆರೆಯಲು ಸುನ್ನತಿ ಮಾಡಿಸಿಕೊಂಡರೆ ಮಾತ್ರ ಸಾಧ್ಯ ಇಲ್ಲವಾದರೆ ಬೇರೆ ದಾರಿ ಇಲ್ಲ ಎಂದು ನಂಬಿದ್ದರು. ಯೆಹೂದ್ಯರಂತೆ ಅನ್ಯಜನರು ಆಗದೆ ಹೋದರೆ ಅವರಿಗೆ ರಕ್ಷಣೆ ಇಲ್ಲ ಎಂದು ಅಂದುಕೊಂಡರು. ಪೌಲ ಮತ್ತು ಬಾರ್ನಬರು ಇದನ್ನು ಒಪ್ಪಲಿಲ್ಲ. ಅದು ಸುವಾರ್ತೆಯ ವಿರುದ್ಧವಾಗಿತ್ತು. ಕೋಪಗೊಂಡಿದ್ದ ಯಹೂದ್ಯರಿಂದಾಗಿ ಮಹಾವಿವಾದವು ಉಂಟಾಯಿತು. ಈ ವಿಷಯವು ಬಹಳ ಮುಖ್ಯವಾಗಿದ್ದರಿಂದ ಸ್ಥಳಿಯ ಹಂತದಲ್ಲಿ ಸಭೆಯ ಒಗ್ಗಟ್ಟಿನಲ್ಲಿ ಗೊಂದಲ ಮೂಡಿತ್ತು. ಅಂತಿಯೋಕ್ಯದ ಸಹೋದರರು ಈ ವಿಷಯಕ್ಕೆ ಸಂಬಂದಿಸಿದಂತೆ ಸಭೆಯ ಕೆಲವರು, ಪೌಲ ಮತ್ತು ಬಾರ್ನಬರನ್ನು ಯೆರೂಸಲೇಮಿಗೆ ಕಳುಹಿಸಿದರು.

**ಯೆಹೂದ್ಯರ ಸ್ಥಾನದಲ್ಲಿ ನೀವು ಇದ್ದಿದ್ದರೆ ಈ ವಿಷಯವಾಗಿ ಏನು ವಾದ ಮಾಡುತ್ತಿದ್ದಿರಿ?**

**ಸೋಮವಾರ** ಆಗಸ್ಟ್-20

## ಸುನ್ನತಿ

ಈ ವಿವಾದದ ಸಮಸ್ಯೆಗಳಲ್ಲಿ ಸುನ್ನತಿಯು ಸಹ ಒಂದು ಸಮಸ್ಯೆಯಾಗಿತ್ತು. ಇದು ಮನುಷ್ಯನಿಂದ ಸ್ಥಾಪಿತವಾದದಲ್ಲ (ಮತಾ. 15:2,9). ಆದರೆ ಇದು ದೇವರ ಆಜ್ಞೆಯಾಗಿದೆ. ಇದು ದೇವರು ಅಬ್ರಹಾಮ ಮತ್ತು ಆತನ ಸಂತಾನದವರನ್ನು ಆರಿಸಿಕೊಂಡಿರುವುದಕ್ಕೆ ಗುರುತಾಗಿದೆ.

**ವಿಮೋ 12:43-49 ಓದಿರಿ: ಇಸ್ರಾಯೇಲ್ಯರಿಗೆ ಗಂಡಸಲ್ಲದೆ ಬೇರೆ ಇನ್ನಾರು ಸುನ್ನತಿ ಮಾಡಿಸಿಕೊಳ್ಳಬೇಕು?**

---

ಈ ಒಡಂಬಡಿಕೆಯಿಂದ ಬರುವ ಆಶೀರ್ವಾದಗಳು ಹುಟ್ಟು ಇಸ್ರಾಯೇಲ್ಯರಿಗೆ ಮಾತ್ರವಲ್ಲದೆ ಕ್ರಯಕ್ಕೆ ತೆಗೆದುಕೊಂಡು ದಾಸನಿಗೂ ಮತ್ತು ಪರವಾಸಿಯು ಸುನ್ನತಿಮಾಡಿಸಿಕೊಂಡಿದ್ದೆಯಾದರೆ ಅವರು ಭಾಗವಹಿಬಹುದಾಗಿತ್ತು. ಸುನ್ನತಿ ಮಾಡಿಸಿಕೊಂಡಮೇಲೆ ಆ ಪರವಾಸಿಗೂಸಹ ಇಸ್ರಾಯೇಲ್ಯರಿಗೆ ಸಿಕ್ಕ ಮಾನ್ಯತೆ ದೇವರ ಮುಂದೆ ಅದೆ ಮಾನ್ಯತೆ ಸಿಗುತ್ತದೆ. ಅವನು ಸಹ ಸ್ಥಳಿಯರಂತೆ ಇರುವನು (ವಿಮೊ.12:48) ದೇವರು ಆರಿಸಿಕೊಂಡ ಜನಾಂಗವಾಗ ಬೇಕಾದರೆ ಎಲ್ಲ ಗಂಡಸರು ಸುನ್ನತಿ ಮಾಡಿಸಿಕೊಳ್ಳುವುದು ಅತ್ಯವಶ್ಯವಾಗಿತ್ತು ಯೇಸು ಇಸ್ರಾಯೇಲರ ಮೆಸ್ಸಿಯನಾಗಿದ್ದರಿಂದ ಯೆಹೊದ್ಯರಿಗೆ ರಕ್ಷಣೆ ಪಡೆಯಬೇಕಾದರೆ ಅನ್ಯಜನರು ಮೊದಲು ಯೆಹೋದ್ಯರಾಗಿರಬೇಕಾಗಿತ್ತು ಎಂದು ಸಹಜವಾಗಿ ಯಹೋದ್ಯರು ಒತ್ತಾಯಿಸಿದರು.

**ರೋಮ.3:30, ಕೊ.7:18 ಮತ್ತು ಗಲಾ.3:25; 5:6 ಓದಿರಿ. ಸುನ್ನತಿ ಎಂದರೆ ಪೌಲನು ಏನೆಂದು ತಿಳಿದಿದ್ದನು?**

---

ಯೆಹೊದ್ಯರನ್ನು ಸೇರದೆ ಹೋದರೆ ಅನ್ಯಜನರಿಗೆ ರಕ್ಷಣೆ ಇಲ್ಲ ಎಂದು ಹೇಳುವುದರ ಮೂಲಕ ಈ ಜನರು ಎರಡು ಭಿನ್ನವಾದ ವಿಚಾರಗಳಾದ ಒಡಂಬಡಿಕೆ ಮತ್ತು ರಕ್ಷಣೆಗೆ ಒಂದುಗೂಡಿಸುತ್ತಿದ್ದರು, (ಯಾ. 4:4; 9:25) ಅಬ್ರಹಾಮನು ನಂಬಿಕೆಯ ಮೂಲಕ ರಕ್ಷಣೆ ಹೊಂದಿದ್ದ. ಅದು ಮೊದಲೇ ಆಗಿತ್ತು, ಅವನು ಸುನ್ನತಿ ಮಾಡಿಸಿಕೊಂಡಿದ್ದರಿಂದಲ್ಲ *(ರೊ. 4:9-13)* ರಕ್ಷಣೆಯು ನಂಬಿಕೆ ಮೂಲಕ ಯಾವಾಗಲೂ ದೊರಕುವುದು. ಆದರೆ

ಒಡಂಬಡಿಕೆಯೂ ಕೃಪೆಯಿಂದ ಬಂದ ಅವಕಾಶವಾಗಿತ್ತು. ಇದರ ಮೂಲಕ ದೇವರು ಮತ್ತು ತನ್ನ ರಕ್ಷಣೆಯ ಯೋಜನೆ ಇಡೀ ಜಗತ್ತಿಗೆ ತಿಳಿಸಲು ಇಚ್ಚಿಸಿದ. ಇಸ್ರಾಯೇಲ್ಯರನ್ನು ಒಂದು ಉದ್ದೇಶಕ್ಕಾಗಿ ಆರಿಸಿಕೊಳ್ಳಲಾಗಿತ್ತು. *(ಆದಿ. 2:1–3)* ಇಲ್ಲಿ ಸಮಸ್ಯೆಯು ಏನೆಂದರೆ ಬಹಳ ಹತ್ತಿರ ಒಂದಕ್ಕೊಂದು ಸಂಬಂಧವಿರುವ ಒಡಂಬಡಿಕೆ ಮತ್ತು ರಕ್ಷಣೆ. ಆದರೆ ಈ ನಂಬಿಗಸ್ತರು ಸುನ್ನತಿಯು ಯೋಗ್ಯವೆಂದು ತಿಳಿದಿದ್ದರು. ದೇವರ ಕೃಪೆಯು ಎಲ್ಲಿ ಮನುಷ್ಯ ಕಾರ್ಯಗಳು ನಡೆಯುತ್ತವೆಯೋ ಅಲ್ಲಿ ದೇವರ ಕೃಪಾ ಕಾರ್ಯವು ನಡೆಯುವುದಿಲ್ಲ. ಅನ್ಯಜನರಲ್ಲಿ ಸುನ್ನತಿಯನ್ನು ಖಡ್ಡಾಯವಾಗಿ ಮಾಡಿಸಿಕೊಳ್ಳಲೇಬೇಕೆಂದು ಒತ್ತಾಯ ಮಾಡುವುದರ ಮೂಲಕ ಸುವಾರ್ತೆಯ ಸತ್ಯದ ಬಗ್ಗೆ ತಪ್ಪು ಅಭಿಪ್ರಾಯವನ್ನು ನೀಡಿ *(ಗಲಾ.1:7; 2:3,5)* ದೇವರ ಕೃಪೆಯನ್ನು ತೊಡೆದುಹಾಕಿದರು *(ಗಲಾ. 2:21)* ಕ್ರಿಸ್ತನಿಂದ ನಿಮಗೆ ಏನು ಪ್ರಯೋಜನವಿಲ್ಲ ಎಂದು ಅವರು ತಿಳಿಸಿದರು *(ಗಲಾ.5:2)*. ಅದಲ್ಲದೆ ಸರ್ವಮಾನ್ಯ ರಕ್ಷಣೆಯ ಗುಣವನ್ನು ಅಲ್ಲಗಳೆದರು*(ರೊ. 3:11; ತೀ. 2:11)* ಪೌಲನು ಎಂದೂ ಇಂಥ ಆಲೋಚನೆಗಳನ್ನು ಒಪ್ಪಲಿಲ್ಲ.

**ಸರಿಯಾದ ಸಭೆಯ ಸದಸ್ಯರಾಗುವುದರ ಮೂಲಕ ರಕ್ಷಣೆ ಸಿಗುವಿದೆಂದು ತಿಳಿದುಕೊಂಡರೆ ಆಗುವ ಅಪಾಯವೇನು?**

**ಮಂಗಳವಾರ** ಆಗಸ್ಟ್–21

## ವಿವಾದ

**ಅ.ಕೃ.15:7–11 ಓದಿರಿ: ಯೆರೂಸಲೇಮಿನಲ್ಲಿ ನಡೆದ ವಿವಾದದಲ್ಲಿ ಪೇತ್ರನ ಕೊಡುಗೆ ಏನು?**

______________________________

______________________________

ಲೂಕನು ಸಭೆಯಲ್ಲಿ ನಡೆದದ್ದನೆಲ್ಲ ವರದಿ ಮಾಡಿಲ್ಲ, ತಿಳಿದುಕೊಳ್ಳಲು ಸ್ವಾರಸ್ಯಕವಾಗಿರಬಹುದಾದದ್ದು ಉದಹಾರಣೆ, ಬೆಂಬಲ ನೀಡುವ ಯೆಹೂದ್ಯರ ವಾಗ್ವಾದ*(ಅ.ಕೃ.15:5)* ಮತ್ತು ಪೌಲ ಮತ್ತು ಬಾರ್ನಬರ ಪ್ರತಿಕ್ರಿಯೆ *(ಅ.ಕೃ. 15:*2) ನಿಜವೆಂದರೆ ಪೇತ್ರ ಮತ್ತು ಯಾಕೋಬನ ಸಂದೇಶದಲ್ಲಿ ಅಪೊಸ್ತಲರನ್ನು ಮತ್ತು ಹಿರಿಕರನ್ನು ಉದ್ದೇಶಿಸಿ ಮಾತನಾಡಿ ಕೊರ್ನೇಲ್ಯನೊಂದಿಗಿನ ವರ್ಷಗಳ ಹಿಂದೆಯೇ ಆದ ಅನುಭವದ ಬಗ್ಗೆ ಅವರಿಗೆ ನೆನೆಪಿಸುತ್ತಾನೆ. ಯೆರೂಸಾಲೇಮಿನ ಸಹೋದರರೊಂದಿಗಿನ ವಾಗ್ವಾದವು ಇಲ್ಲಿಯೂ ಮಾಡಿದ *(ಅ.ಕೃ. 11:4–7*) ದೇವರುತಾನೆ ಕೊರ್ನೇಲ್ಯನ ಮತಾಂತರದ ಬಗ್ಗೆ ಒಪ್ಪಿಕೊಂಡಿದ್ದ. (ಸುನ್ನತಿ ಮಾಡಿಸದೆ ಇದ್ದ ಅನ್ಯಜನಾಂಗದವನಾಗಿದ್ದಾಗ್ಯೂ) ಪಂಚಾಶತ್ತಮದಲಲ್ಲಿ ಅಪೊಸ್ತಲರಿಗೆ ಪವಿತ್ರಾತ್ಮನನ್ನು ಕೊಟ್ಟಹಾಗೆಯೇ ಕೊರ್ನೇಲ್ಯನು ಮತ್ತು ಆತನ ಮನೆಯವರಿಗೆ ಕೊಟ್ಟನು.

ದೈವಿಕ ಅನುಗ್ರಹದಲ್ಲಿ ದೇವರು ಪ್ರೀತಿಯನ್ನು ಉಪಯೋಗಿಸಿಕೊಂಡು ಯೆಹೂದ್ಯನಂಬಿಗಸ್ತರನ್ನು ರಕ್ಷಣೆಯ ಬಗ್ಗೆ ಯೆಹೂದ್ಯರು ಮತ್ತು ಅನ್ಯಜನರ ಮಧ್ಯದಲ್ಲಿ ಭಿನ್ನಾಬಿಪ್ರಾಯ ಬರದಂತೆ ಅವರು ಒಪ್ಪಿಸಿದರು. ಹಳೆಯ ಒಡಂಬಡಿಕೆಯ ನಿಯಮಗಳ ಶುದ್ದೀಕರಿಸುವ ಲಾಭಗಳನ್ನು ಪಡೆದಿದ್ದರೂ ನಂಬುವ ಅನ್ಯಜನರನ್ನು ಅಶುದ್ದರೆಂದು ಪರಿಗಣಿಸಲಾಗದು ಯಾಕೆಂದರೆ ದೇವರು ತಾನೆ ಅವರ ಹೃದಯಗಳನ್ನು ಶುದ್ದೀಕರಿಸಿದನು. ಪೇತ್ರನ ಕೊನೆಯ ಹೇಳಿಕೆ ನಾವು ಪೌಲನಿಂದ ಏನನ್ನು ಅಪೇಕ್ಷಿಸುತ್ತೇವೋ ಅದೇ ಆಗಿತ್ತು. ಕರ್ತನಾದ ಯೇಸುವಿನ ಕೃಪೆಯಲ್ಲೇ ನಾವು ರಕ್ಷಣೆ ಹೊಂದುವೆವೆಂಬುದಾಗಿ ನಾವು ನಂಬುತ್ತೇವಲ್ಲಾ ಹಾಗೆಯೇ ಅವರು ಹೊಂದುವರು. *(ಅ.ಕೃ. 15:11)*

**ಅ.ಕೃ.15:13–21 ಓದಿರಿ: ಅನ್ಯಜನರ ಸಮಸ್ಯೆಗೆ ಯಾಕೋಬನು ಯಾವ ಪರಿಹಾರವನ್ನು ಸೂಚಿಸಿದನು?**

______________________________

______________________________

ಯಾಕೋಬನು ತನ್ನ ಸಂದೇಶ ಅಧಿಕಾರದಿಂದಲೇ ಮಾತನಾಡಿದನೆಂದು ಸೂಚಿಸುತದೆ. *(ಅ.ಕೃ.12:17; 21:18; ಗಲಾ. 2:9,12)* ಬಿದ್ದು ಹೋಗಿರುವ ದಾವೀದನ ಗುಡಾರವನ್ನು ಮತ್ತು ಕಟ್ಟುವುದರ ಬಗ್ಗೆ ಏನು ತಿಳಿದುಕೊಂಡಿದ್ದರು. ಆಮೋಸ ಪ್ರವಾದನೆಯಲ್ಲಿ ದಾವೀದನ ಸಂಸ್ಥಾನ ಪುನಃಸ್ಥಾಪನೆ ಬಗ್ಗೆ ಇದೆ *(ಆಮೋಸ 9:11,12)* ಯಾಕೋಬನ ಮುಖ್ಯ ಉದ್ದೇಶವು ದೇವರು ಆಗಲೇ ಅನ್ಯಜನರು ದೇವರು ಆರಿಸಿಕೊಂಡ ಮಕ್ಕಳೊಂದಿಗೆ ಬೆರೆಯಲು ದಾರಿಮಾಡಿದ್ದ ಹಾಗಾಗಿ ಅವರು ಇಸ್ರಾಯೇಲ್ಯರೊಂದಿಗೆ ಬೆರೆಯಬಹುದಾಗಿತ್ತು.

ಇದರಿಂದಾಗಿ ಮತಾಂತರವಾದ ಅನ್ಯಜನರಿಗೆ ಯಾವುದೆ ತಡೆ ಬರಬಾರದೆಂದು ಅದು ಇಸ್ರಾಯೇಲ್ಯರ ದೇಶದೊಳಗೆ ವಾಸಿ ಮಾಡಲು ಇಚ್ಚಿಸುವ ಪರದೇಶ ಜನರಿಗೆ ಮಾತ್ರ ಅನ್ವಯಿಸುತ್ತದೆ.

**ಬುಧವಾರ** ಆಗಸ್ಟ್–22

## ಅಪೊಸ್ತಲರ ವಿಧಿ

ಅ.ಕೃ. 15:28,29 ಓದಿರಿ: ಯಾವ ನಾಲ್ಕು ನಿಷೇಧಾಜ್ಞೆಯನ್ನು ಮತಾಂತರವಾದ ಅನ್ಯಜನರಿಗೆ ಸಭೆಯು ವಿಧಿಸಿತು. ಯಾವ ಸಮಸ್ಯೆಗೋಸ್ಕರ ಸಭೆಯು ಸೇರಿತೋ ಅದು ಸಮಾಧಾನಕರವಾಗಿ ಬಗೆಹರಿಯಿತು, ಯಾಕೆಂದರೆ ರಕ್ಷಣೆಯು ಕೃಪೆಯಿಂದಲೇ, ನಂಬುವ ಅನ್ಯಜನರು ಸುನ್ನತಿ ಮಾಡಿಸಿಕೊಳ್ಳದೆ ಸಭೆಗೆ ಸೇರಬಹುದಾಗಿತ್ತು. ಆದರೂ ಅವರು ನಾಲ್ಕು ವಿಷಯಗಳಿಂದ ದೂರವಿರಬೇಕಾಗಿತ್ತು. 1) ವಿಗ್ರಹಕ್ಕೆ ನೈವೇದ್ಯ ಮಾಡಿದ್ದನ್ನು ದೇವಸ್ಥಾನಗಳಲ್ಲಿ ಬಡಿಸಿದ್ದನ್ನು ಅಥವಾ ಅದನ್ನು ಮಾರುಕಟ್ಟೆಯಲ್ಲಿ ಮಾರಿದ್ದನ್ನು ತಿನ್ನಬಾರದು. 2) ರಕ್ತವನ್ನು ಸೇವಿಸಬಾರದು. 3) ಕುತ್ತಿಗೆ ಹಿಸುಕಿ ಕೊಂದ ಪಶುಗಳ ಮಾಂಸ ಸೇವಿಸಬಾರದು. 4) ಯಾವುದೇ ತರದ ಹಾದರವನ್ನು ಮಾಡಬಾರದು (ಜಾರತ್ವವನ್ನು). ಅನೇಕ ಕ್ರೈಸ್ತರು ಇವತ್ತು ಆಹಾರಕ್ಕೆ ಸಂಬಂಧಿಸಿದ ನಿಷೇಧಾಜ್ಞೆಗಳನ್ನು ತಾತ್ಕಾಲಿಕ ಶಿಫಾರಸ್ಸು ಎಂದು ತಿಳಿದುಕೊಂಡಿದ್ದಾರೆ, ಅಂಥವುಗಳು ಯೆಹೂದ್ಯರಿಗೆ ಅಸಹ್ಯಕರವಾದವು. ನಿಷೇಧಾಜ್ಞೆಗಳು ಯಹೂದ್ಯರನ್ನು ಮತ್ತು ಅನ್ಯಜನರ ಮಧ್ಯೆ ಇದ್ದ ಅಂತರವನ್ನು ಸರಿಪಡಿಸಲು ಎಂದು ವಾದ ಮಾಡುತ್ತಾರೆ. ಆ ರೀತಿ ಹಳೆಯ ಒಡಂಬಡಿಕೆಯಲ್ಲಿ ಇರುವ ಕಟ್ಟಳೆಗಳಾದ ಯಾಜಕ, ಆಹಾರದ ನಿಯಮಗಳು, ಮತ್ತು ಸಬ್ಬತ್ತಿನ ಆಜ್ಞೆ *(ವಿಮೋ 20:8–11*) ಇವುಗಳು ಪಟ್ಟಿಯಲ್ಲಿ ಇಲ್ಲ *(ಯಾಜ. 11)* ಅವುಗಳು ಯಾವುವು ಕ್ರೈಸ್ತರನ್ನು ಒಂದುಗೂಡಿಸುತ್ತಿಲ್ಲ.

ಅಪೊಸ್ತಲರ ವಿಧಿಗಳು ತಾತ್ಕಾಲಿಕವೂ ಅಲ್ಲ ಮತ್ತು ಕ್ರೈಸ್ತರಿಗೆ ಕ್ರೈಸ್ತೀಯ ಹಳೆಯ ಒಡಂಬಡಿಕೆಗೆ ಸಂಬಂಧ ಪಟ್ಟವುಗಳನ್ನು ಬಿಟ್ಟುಬಿಟ್ಟ ನೀತಿ ನಿಯಮಗಳು ಆಗಿರಲಿಲ್ಲ. ಆದರೆ ಪವಿತ್ರಾತ್ಮನ ಮಾರ್ಗದರ್ಶನದಿಂದ ಅಪೊಸ್ತಲರು ಮತ್ತು ಸಭೆಯ ಹಿರಿಕರು *(ಯಾಜಕಕಾಂಡ 17–18ದ)* ನಿಯಮಗಳನ್ನು ಪುನರುತ್ಪತ್ತಿಸಿದರು. ಇಸ್ರಾಯೇಲ್ಯರೊಂದಿಗೆ ಪರದೇಶಿಗಳಾಗದವರಿಗೆ ಮಾತ್ರವಾಗಿತ್ತು. ಯಾಜಕಾಂಡಕ್ಕೆ ಸಂಬಂಧಿಸಿದಂತೆ ಈ ನಿಷೇಧವನ್ನು ವಿಗ್ರಹ ಆರಾಧನೆಯಯನ್ನು ತ್ಯಜಿಸುವುದಕ್ಕಾಗಿತ್ತು. ಪರದೇಶಿಯರು ಇಸ್ರಾಯೇಲರಲ್ಲಿ ವಾಸಿಸಬೇಕೆಂದರೆ ಅವರು ವಿಗ್ರಹಾರಾಧನೆಯನ್ನು ಬಿಡಬೇಕಾಗಿತ್ತು. ಅದರಂತೆ ನಂಬಿದ ಅನ್ಯಜನರು ಸಭೆಗೆ ಸೇರಬೇಕಾದರೆ ಅವರು ವಿಗ್ರಹಾರಾಧನೆ ವಿರುದ್ಧ ದೃಢ ನಿರ್ಧಾರ ತೆಗೆದುಕೊಳ್ಳಬೇಕಾಗಿತ್ತು. ಇದು ಅವರ ಮೊದಲನೇ ಹೆಜ್ಜೆಯಾಗಿತ್ತು, ಸಹಜವಾಗಿ ಅವರು ಒಳಗೆ ಬಂದ ಮೇಲೆ ದೇವರ ಚಿತ್ತಾನುಸರವಾಗಿ ಆಜ್ಞೆಗಳನ್ನು ಪಾಲಿಸಬೇಕಾಗಿತ್ತು. ಅವುಗಳಲ್ಲಿ ಸಬ್ಬತ್ತು *(ಆದಿ. 2:1–3)* ಶುದ್ಧ ಮತ್ತು ಅಶುದ್ಧವಾದ ಆಹಾರ ಯಾವುದೆಂದು ತಿಳಿಯುವುದು. ಅ ವಿಧಿಯು ತಾತ್ಕಾಲಿಕವಾದುದ್ದಲ್ಲ ಎಂದು ಸ್ಪಷ್ಟವಾಗಿದೆ, ಉದಾಹರಣೆ: *ಪ್ರಕಟನೆ 2:14,20* ಮೊದಲ ಮತ್ತು ಕೊನೆ ನಿಷೇಧಾಜ್ಞೆಯು ಮರುಕಳಿಸಿವೆ. ಇತಿಹಾಸದ ಪ್ರಕಾರ ಆ ವಿಧಿಯನ್ನು  ಹೊಸ ಒಡಂಬಡಿಕೆಯ ಕಾಲದ ನಂತರವೂ ಕ್ರೈಸ್ತರು ಇನ್ನು ಪರಿಗಣಿಸುತ್ತಿದ್ದರು.

**ಭಿನ್ನಾಭಿಪ್ರಾಯಗಳು ಬಂದಾಗ ಹೇಗೆ ಜೊತೆಯಾಗಿ ಕೂತುಕೊಂಡು ಮಾನವೀಯತೆ ಮತ್ತು ಮರ್ಯಾದೆಯಿಂದ ಒಬ್ಬರನೊಬ್ಬರು ಕೇಳಿ ಸಮಸ್ಯೆಗಳನ್ನು ಬಗೆಹರಿಸಬೇಕು?**

**ಗುರುವಾರ** ಆಗಸ್ಟ್–23

## ಯೆರೂಸಲೇಮಿನಿಂದ ಪತ್ರ

**ಅ.ಕೃ. 15:22–29 ಓದಿರಿ: ಸಭೆಯ ನಿರ್ಧಾರಗಳ ಬಗ್ಗೆ ಯಾರೂಸಲೇಮಿನ ಸಭೆಯು ಹೆಚ್ಚುವರಿಯಗಿ ಯಾವ ಕ್ರಮ ತಗೆದುಕೊಂಡರು?**

---

---

ಮೊದಲನೆಯದಾಗಿ ನಂಬಿದ್ದ ಅನ್ಯಜನರಿಗೆ ತೆಗೆದುಕೊಂಡ ನಿರ್ಧಾರಗಳ ಬಗ್ಗೆ ತಿಳಿಸುವದಗೋಸ್ಕರ ಪತ್ರವನ್ನು ಬರೆಯಬೇಕೆಂಬುದು. ಆ ಪತ್ರವನ್ನು ಅಪೊಸ್ತಲರ ಮತು ಯೆರೂಸಲೇಮಿನ ಸಭೆಯ ಹಿರಿಕರ ಹೆಸರಿನಲ್ಲಿ ಬರೆದಿದ್ದರು. ಆ

ಪತ್ರವು ಯೆರೂಸಲೇಮಿನ ಸಭೆಯ ಪ್ರಾಬಲ್ಯತೆ ತೋರಿಸುವ ಒಂದು ಅಧಿಕೃತಪತ್ರವಾಗಿತ್ತು. ಬೇರೆ ಕ್ರೈಸ್ತ ಸಮುದಾಯದಕ್ಕೆ ಅಪೊಸ್ತಲರ ನಾಯಕತ್ವವು ಒಂದು ಕಾರಣವಾಗಿತ್ತು. ಅದು ಎ.ಡಿ.49ರಲ್ಲಿ ಬರೆಯಲಾಗಿತ್ತು. ಈ ಪತ್ರವು ಹಿಂದಿನ ಕ್ರೈಸ್ತರ ದಾಖಲಾತಿಯಾಗಿತ್ತು. ಬಾರ್ನಬನೆನಿಸಿಕೊಳ್ಳುವ ಯೂದನನ್ನು ಮತ್ತು ಸೀಲನನ್ನು ಮತ್ತು ತಮ್ಮಲ್ಲಿ ಇಬ್ಬರನ್ನು ಆರಿಸಿಕೊಂಡು ಪೌಲ ಮತ್ತು ಬಾರ್ನಬರ ಜೊತೆಮಾಡಿ ಅಂತಿಯೋಕ್ಯಕ್ಕೆ ಕಳಿಸುವುದಾಗಿ ಸರ್ವ ಸಭೆಯು ಸಮ್ಮತಿಯಿಂದ ನಿರ್ಧಾರ ತೆಗೆದುಕೊಂಡಿತು, ಅವರ ಕೆಲಸವೇನೆಂದರೆ ಆ ಪತ್ರವನ್ನು ತೆಗೆದುಕೊಂಡು ಹೋಗಿ ಅದರಲ್ಲಿಯ ವಿಷಯವನ್ನು ಮುಟ್ಟಿಸುವುದಾಗಿತ್ತು.

**ಅ.ಕೃ.15:30–33 ಓದಿರಿ: ಅಂತಿಯೋಕ್ಯದ ಸಭೆಯವರು ಈ ಪತ್ರಕ್ಕೆ ಹೇಗೆ ಪ್ರತಿಕ್ರೀಯಸಿದರು?**

______________________________________________

______________________________________________

ಆ ಪತ್ರವನ್ನು ಓದಲಾಯಿತು ವಿಷಯ ತಿಳಿದ ಸಭೆಯವರು ಉಲ್ಲಾಸಭರಿತರಾದರು ಯಾಕೆಂದರೆ ಮತಾಂತರ ಹೊಂದಿದ ಅನ್ಯಜನರಿಗೆ ಸುನ್ನತಿ ಮಾಡಿಸಿಕೊಳ್ಳುವದು ಅವಶ್ಯವಾಗಿರಲಿಲ್ಲ ಎಂಬ ಧೈರ್ಯಕೊಡುವ ಸಂದೇಶ ಆ ಪತ್ರದ ಮೂಲಕ ತಿಳಿಸಲಾಗಿತ್ತು.

ಆ ಪತ್ರದಲ್ಲಿ ಇದ್ದ ಬೇಡಿಕೆಗಳಿಗೆ ಯಾವ ವಿರೋಧ ಪ್ರತಿಕ್ರಿಯ ನೀಡಲಿಲ್ಲ. ಸಭೆಯು ಮುಗಿದ ವೇಳೆಯಲ್ಲಿ ಪೌಲನ ಸುವಾರ್ತೆಯನ್ನು ಸಭೆಯ ನಾಯಕರು ಯೆರೂಸಲೇಮಿನಲ್ಲಿ ಗುರುತಿಸಿ. ನಂಬಿಕೆ ಮತ್ತು ಸ್ವೀಕಾರ ಮಾಡಿದ ಗುರುತಾಗಿ ಅವರು ಪೌಲ ಮತ್ತು ಬಾರ್ನಬರಿಗೆ ಬಲಗೈಯನ್ನು ನೀಡಿದರು*(ಗಲಾ. 2:9)* ಆದರೂ ಯೆಹೂದ್ಯ ಕ್ರೈಸ್ತರು ಯೆಹೂದ್ಯ ನಿಯಮಗಳನ್ನು ಪಾಲಿಸುವವರು. ಅನ್ಯಜನರೊಂದಿಗೆ ಸೇರಿ ಜೊತೆಯಲ್ಲಿ ಊಟ ಮಾಡುವುದು ದೊಡ್ಡ ಸಮಸ್ಯೆ ಎಂದು ಯೋಚಿಸಿದರು. ಈ ಸಮಸ್ಯೆಯು ಕಾಣಿಸಿಕೊಂಡಿದೆ. ಉದಾಹರಣೆ ಪೇತ್ರ ಒಳಗೊಂಡ ಒಂದು ಘಟನೆಯು *(ಗಲಾ. 2:11–14)* ಶಿಷ್ಯರು ಸಹ ಎಂದು ಹೇಳುತ್ತಾರೆ. ಸಭೆಯ ನಿರ್ಧಾರವನ್ನು ಇಚ್ಛೆಯಿಂದ ಸ್ವೀಕರಿಸಲು ಸಿದ್ದರಾಗಿರಲಿಲ್ಲ. ಎಲೆನ್.ಜಿ.ವೈಟ್ *"ದಿ ಆಕಟ್ಸ್ ಆಫ್ ದಿ ಅಪೋಸ್ಟಲ್ಸ್"*.

**ನೀವು ಅಪ್ರಾಮಾಣಿಕರಾಗಿ: ಬೇರೆ, ಜನರ, ಸಂಸ್ಕೃತಿ ಮತ್ತು ಜಾತಿಯವರ ಜೊತೆ ಬೆರೆಯಲು ಎಷ್ಟು ಕಷ್ಟವೆನಿಸಬಹುದು?**

## ಶುಕ್ರವಾರ

ಆಗಸ್ಟ್–24

**ಹೆಚ್ಚಿನ ಚಿಂತನೆ:** ಮತಾಂತರಗೊಂಡ ಯೆಹೂದ್ಯರು ದೇವರ ಅನುಗ್ರಹದಿಂದ ತೆರೆದ ಮಾರ್ಗಕ್ಕೆ ವಾಲಲಿಲ್ಲ. ಅನ್ಯಜನರಲ್ಲಿ ಅಪೊಸ್ತಲರು ಮಾಡಿದ ಕೆಲಸದಿಂದ ಮತಾಂತರವಾದ ಯೆಹೂದ್ಯ ಜನಸಂಖ್ಯೆಗಿಂತ ಅನ್ಯಜನರ ಸಂಖ್ಯೆಯು ಹೆಚ್ಚ ಬಹುದೆಂಬ ಭಯವಿತ್ತು. ಯೆಹೂದ್ಯರ ನೀತಿ ನಿಯಮಗಳ ಶಿಷ್ಟಾಚಾರಗಳಿಗೆ ಸಭೆಯ ಒಡನಾಡಿತನಕ್ಕೆ ಅನ್ಯಜನರಿಗೆ ನಿರ್ಬಂಧಿಸದಿದ್ದರೆ ಏನಾಗುವುದೋ ಎಂಬ ಭಯ ಯೆಹೂದ್ಯರಿಗೆ ಇತ್ತು. ಯೆಹೂದ್ಯರ ಆಚಾರವಿಚಾರಗಳು ಅವರನ್ನು ಬೇರೆ ಜನರಿಂದ ವಿಭಿನ್ನವಾಗಿಸಿತ್ತು. ಇಲ್ಲಿಯವರೆಗೂ ಯೆಹೂದ್ಯರು ಕಾಪಾಡಿಕೊಂದು ಬಂದ ಆಚಾರ ವಿಚಾರಗಳು, ನಿಯಮಗಳು ಸುವಾರ್ತೆಯನ್ನು ಸ್ವೀಕರಿಸಿದ ಜನರಲ್ಲಿ ಕಾಣದೆ ಹೋಗಬಹುದೆಂಬ ಭಯವಿತ್ತು.

ಯೆಹೂದ್ಯರ ವಿಚಿತ್ರವಾದ ಅನುಕೂಲಗಳಿಂದ ಸಭೆಯ ಅಕ್ಕಪಕ್ಕದಲ್ಲಿ ಇದ್ದ ಯೆಹೂದ್ಯ ಕ್ರೈಸ್ತರು ತಮ್ಮ ಮನಸ್ಸುಗಳನ್ನು–ಕ್ರೈಸ್ತಿಯ ಸಭೆಯು ಯೆಹೂದ್ಯ ಶಿಷ್ಟಾಚಾರಗಳು ಮತ್ತು ಸಂಪ್ರದಾಯ ಯೆಹೂದ್ಯರ ವಿಚಿತ್ರವಾದ ಸಂಪ್ರದಾಯ ಪದ್ದತಿ ಹೊಸ ನಂಬಿಕೆಯಿಂದಾಗಿ ಅತಿ ಬೇಗನೆ ಮಾಯವಾಗುವದೆಂದು ಹೇಳಿಕೊಳ್ಳುತ್ತಿದ್ದರು. ದೊಡ್ಡ ಪ್ರಮಾಣದಲ್ಲಿ ಬದಲಾವಣೆ ತಂದ ಪೌಲನ ಮೇಲೆ ಅನೇಕರು ಕೋಪಗೊಂಡರು. ಶಿಷ್ಯರೂ ಸಹ ಸಭೆಯ ನಿರ್ಧಾರವನ್ನು ಸ್ವೇಚ್ಛೆಯಿಂದ ಅಂಗೀಕರಿಸಲು ಸಿದ್ಧವಿರಲಿಲ್ಲ. ಕೆಲವರು ಸಂಪ್ರದಾಯದ ನಿಯಮಗಳಲ್ಲಿ ಆಸಕ್ತಿ ಇತ್ತು. ಯೆಹೂದ್ಯ ನಿಯಮಗಳನ್ನು ಪೌಲನು ಅಲಕ್ಷಿಸುತ್ತಿದ್ದಾನೆಂದು ಅನೇಕರು ಅಸಮ್ಮತಿ ವ್ಯಕ್ತಪಡಿಸಿದರು.

**ಚರ್ಚೆಯ ಪ್ರಶ್ನೆಗಳು:**

1. ಸೋಮವಾರದ ಕೊನೆಯ ಪ್ರಶ್ನೆಗೆ ಹಿಂದಕ್ಕೆ ಹೋಗಿ, ಸರಿಯಾದ ಸಭೆಗೆ ಸೇರಿದವರಾದರೆ ಅವರಿಗೆ ರಕ್ಷಣೆ ಸಿಗುವುದೆಂಬ ಯಾವ ಭರವಸೆಯು ಇಲ್ಲದಿರುವದನ್ನು ಹೇಗೆ ಅರ್ಥಮಾಡಿಕೊಳುತ್ತೀರಿ? ಉದಾಹರಣೆ: ಪುರಾತನ ಇಸ್ರಾಯೇಲ ಸಭೆಯು ಸರಿಯಾದ ಸಭೆಯಾಗಿತ್ತು, ಹಾಗೆಂದ ಮಾತ್ರಕ್ಕೆ ಅದಕ್ಕೆ ಸೇರಿದವರೆಲ್ಲರಿಗೂ ರಕ್ಷಣೆಯಾಗಿದೆ ಅಂತಲ್ಲ, ಸತ್ಯ ಸಭೆಯವರಾದರೂ ರಕ್ಷಣೆ ಸಿಗುವುದೆಂದು ಯಾವ ಭರವಸೆಯಿಲ್ಲ. ಆದರೆ ಈ ಸಭೆಯವರಿಗೆ ಯಾವ ಪ್ರಯೋಜನವಿದೆ?

2. ಸುನ್ನತಿ ಮಾಡಿಸಿಕೊಳ್ಳದೆ ಇರುವ ಅನ್ಯಜನರನ್ನು ಸಮುದಾಯದಲ್ಲಿ ಸ್ವೀಕರಿಸುವುದು ಸಭೆಯ ಆಡಳಿತದವರು ಎದುರಿಸಿದ ಮುಖ್ಯವಾದ ಮೊದಲನೇಯ ಸಮಸ್ಯೆಯಾಗಿತ್ತು. ಹೋಲಿಕೆಯಾಗುವ ಯಾವ ಸಮಸ್ಯೆಗಳನ್ನು ನಮ್ಮ ಸಭೆಗಳಲ್ಲಿ ಎದುರಿಸುತ್ತಿದ್ದೇವೆ. ಅ.ಕೃ. 15ರಲ್ಲಿ ಇರುವ ಉದಾಹರಣೆಯು ಅಂಥ ಸಮಸ್ಯೆಗಳನ್ನು ಹೇಗೆ ಎದುರಿಸಬೇಕೆಂದು ತಿಳಿಸುತ್ತದೆ?

3. ಈ ವಾಗ್ವಾದವು ಇಂದಿನ ಸಮಸ್ಯೆಗಳಿಗೆ ಹೇಗೆ ಯಥಾವಿತ್ತಾಗಿ ಬೆಳಕು ಚೆಲ್ಲುತ್ತದೆ. ಹಾಗೂ ಹಿಂದಿನ ಸಮಸ್ಯಗಳು ಈಗಿನ ಸಮಸ್ಯಗಳಿಗಿಂತ ಹೇಗೆ ಕ್ಲಿಷ್ಯಕರವಾಗಿದ್ದವು ಎಂದು ನಮಗನ್ನಿಸುತ್ತದೆ?